# ಅಧ್ಯಯನಕ್ಕೆ ಪೂರಕ ಅಂಶಗಳು-3

ಸ್ವಾಮಿ ಧರ್ಮವ್ರತಾನಂದ

**ಪ**ರೀಕ್ಷೆಯ ದಿನದ ತಯಾರಿಗಾಗಿ ವಿದ್ಯಾರ್ಥಿಯ ಪ್ರಯತ್ನ ಹೇಗಿರಬೇಕು? — ಒಂದು ನೋಟ ಇಲ್ಲಿದೆ.

## ಪರೀಕ್ಷೆ : ಅದರ ಅರ್ಥ

ಪರೀಕ್ಷೆ ! ಹಿಂದೆ ಪರೀಕ್ಷೆಯೆಂಬುದು ವಿದ್ಯಾರ್ಥಿಗಳಿಗೆ ಅದೊಂದು ಹಬ್ಬದಂತೆ ಇತ್ತು. ವಿಶೇಷ ರೀತಿಯಲ್ಲಿ ಅದಕ್ಕಾಗಿ ಸಿದ್ಧರಾಗುವುದು, ಅಂದು ಎಲ್ಲರೂ ಎಲ್ಲರಿಗೂ ಶುಭ ಕೋರುತ್ತಾ ಯಾರು ಯಾರು ಎಷ್ಟು ಓದಿದ್ದಾರೆ, ಎಷ್ಟು ಚೆನ್ನಾಗಿ ಓದಿದ್ದಾರೆ ಎಂಬುದನ್ನು ವಿಚಾರಿಸುವುದು. ಓದು



ವುದಕ್ಕಾಗಿ ಸ್ಥಳವನ್ನು ಗುರುತಿಸುವುದು, ಸ್ನೇಹಿತರೊಡನೆ ಹರಟೆ ಹೊಡೆಯುತ್ತಾ, ಆಗಾಗ ತಮಾಷೆ ಮಾಡುತ್ತಾ, ಮಧ್ಯ ದಲ್ಲಿ ಬಹಳ ಗಂಭೀರವಾಗಿ ಓದುತ್ತಾ ಇರುವುದು. ಪರೀಕ್ಷೆ ಮುಗಿದ ನಂತರ ಏನು ಮಾಡಬೇಕು, ಎಲ್ಲಿಗೆ ಹೋಗಬೇಕು ಎಂದು ಮೊದಲೇ ನಿರ್ಧರಿಸಿ, ಆನಂದಿಸುವುದು. ಪರೀಕ್ಷಾ ಕೊಠಡಿಯಲ್ಲಿ ವರ್ಷವಿಡೀ ಓದಿದ್ದನ್ನು ಸಮಯದೊಳಗೆ ಬರೆದು ಮುಗಿಸಿ ಮುಂದಿನ ಪರೀಕ್ಷೆಗೆ ಸಿದ್ಧತೆ ನಡೆಸುವುದು. ಓಹ್! ಎಷ್ಟೊಂದು ಮಜಾ, ಎಷ್ಟೊಂದು ಆನಂದ! ಅದೊಂದು ಮರೆಯಲಾರದ ದಿನಗಳಾಗಿ ಪರಿಣಮಿಸುತ್ತಿತ್ತು. ಪರೀಕ್ಷೆ ಆಗ ನಾವು ಓದಿದ್ದನ್ನು ಎಷ್ಟು ಅರಿತುಕೊಂಡಿದ್ದೇವೆ, ಜ್ಞಾನವೆಷ್ಟನ್ನು ಸಂಪಾದಿಸಿದ್ದೇವೆ ಎಂಬುದನ್ನು ಮಾಪನ ಮಾಡುವ ವಿಧಾನವಾಗಿತ್ತು. ಅಂಕಗಳಿಸುವುದಕ್ಕಿಂತ ತಿಳಿ ವಳಿಕೆಗೆ ಹೆಚ್ಚಿನ ಮಹತ್ವವನ್ನು ನೀಡುತ್ತಿದ್ದರು.

ಆದರೆ, ಇಂದು ಪರೀಕ್ಷೆ ಎಂದರೆ ಒಂದು ಯುದ್ಧವೆಂಬಂ ತಾಗಿದೆ. ಅದಕ್ಕೆ ನಡೆಸುವ ಸಿದ್ಧತೆ ನೋಡಿದರೆ, ಸಿದ್ಧತೆ ನಡೆಸುವ ವಿದ್ಯಾರ್ಥಿಗಳನ್ನು ನೋಡಿದರೆ, ಅಯ್ಯೋ ಎನ್ನು ವಂತಾಗಿದೆ. ಅಷ್ಟೇ ಅಲ್ಲದೆ ಆ ವಿದ್ಯಾರ್ಥಿಗಳ ಪೋಷಕರ ಅವಸ್ಥೆಯೂ ಕೂಡ ಕೆಲವೊಮ್ಮೆ ಚಿಂತಾಜನಕ ಆಗಿಬಿಡುತ್ತದೆ. ಇದಕ್ಕೆ ಕಾರಣವೇನು? ಎಂದು ನೋಡಿದರೆ ಹಲವನ್ನು ಗುರು ತಿಸಬಹುದು.

ಉದಾಹರಣೆಯಾಗಿ ಹೇಳುವುದಾದರೆ, ಸಮಯ, ಏಕಾ ಗ್ರತೆ, ಬರವಣಿಗೆ, ಸರಿಯಾದ ತಯಾರಿ, ನಮ್ಮ ಮನಸ್ಸು ಮುಂತಾದವುಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿ ಕೊಳ್ಳದಿರುವುದು ಅಥವಾ ಪಾಲಿಸದಿರುವುದು ಕಂಡುಬರು ತ್ತದೆ. ಮೊದಲು ಇವುಗಳ ಆವಶ್ಯಕತೆಯ ಬಗ್ಗೆ ಅಷ್ಟಾಗಿ ಗಮನವನ್ನು ನಾವು ಕೊಡದಿದ್ದರೂ, ಪರೀಕ್ಷಾ ಸಮಯದಲ್ಲಿ ಮಾತ್ರ ಅವುಗಳು ಪೆಡಂಭೂತದಂತೆ ನಮ್ಮನ್ನು ಕಾಡುತ್ತವೆ. ಮೊದಮೊದಲು ಇವುಗಳು ನಗಣ್ಯವಾದರೂ ಕೊನೆಕೊನೆಗೆ ಇವು ನಮ್ಮ ಪರೀಕ್ಷೆಯಲ್ಲಿ ಅತಿ ಮುಖ್ಯವಾದ ಪಾತ್ರವನ್ನು ವಹಿಸುತ್ತವೆ. ಅವುಗಳ ಬಗ್ಗೆ ಸ್ವಲ್ಪವಾಗಿ ಅರಿಯಲು ಈಗ ಪ್ರಯತ್ನಿಸೋಣ.

## ಸರಿಯಾದ ಬರವಣಿಗೆ ಮುಖ್ಯ

ಸಂಸ್ಕೃತದಲ್ಲಿ ಒಂದು ತಮಾಷೆಯ ಹಾಗೂ ಯೋಚ ನೀಯವಾದ ಮಾತೊಂದಿದೆ. '**ಪೀನೋ ದೇವದತ್ತಃ ದಿವಾ ನ ಭುಂಕ್ತೇ**' ಅಂದರೆ, ದಪ್ಪನಾಗಿರುವ ದೇವದತ್ತ ಹಗಲಿನಲ್ಲಿ ಊಟ ಮಾಡುವುದಿಲ್ಲ. ಅಂದರೆ ಆತ ರಾತ್ರಿಯ ಹೊತ್ತಲ್ಲಿ ಮಾತ್ರವೇ ತಿನ್ನುತ್ತಾನೆ. ತಿನ್ನದಿದ್ದಲ್ಲಿ ಆತ ತೂಕವನ್ನು ಕಳೆದು ಕೊಂಡು ರೋಗಿಯಂತಾಗಿ, ತೆಳ್ಳಗೆ ಇರುತ್ತಿದ್ದ. ಆತ ತಿನ್ನುವುದ ರಿಂದಲೇ ದಪ್ಪಗಿದ್ದಾನೆ ಎಂದು. ಅಂದರೆ ಕಾರ್ಯವು ಕಾರಣ



ದಲ್ಲಿ ಕಂಡುಬರುತ್ತದೆ. ಸಾಧನೆಯಲ್ಲಿ ಮಾರ್ಗವು ಅಡಕವಾಗಿರುತ್ತದೆ.

ಇಲ್ಲಿ ನಾವು ಸರಿಯಾದ ರೀತಿಯಲ್ಲಿ ಅಧ್ಯಯನವನ್ನು ಮತ್ತು ಬರವಣಿಗೆಯ ಅಭ್ಯಾಸವನ್ನು ಮಾಡಿದ್ದಲ್ಲಿ ಮಾತ್ರವೇ ನಮಗೆ ವಿಷಯದ ಒಳ ಹೊರಗು ಸರಿಯಾಗಿ ತಿಳಿಯುತ್ತದೆ. ಕೇವಲ ಕೇಳಿದವರಂತೆ ಅಥವಾ ಕೇಳಿಸಿಕೊಂಡವರಂತೆ ನಾಟಕವಾಡಿದ್ದಲ್ಲಿ ನಮ್ಮ ಬಣ್ಣ ಇಂದಲ್ಲ ನಾಳೆ ಬಯಲಾಗುತ್ತದೆ. ಆದ್ದರಿಂದಲೇ ನಾವು ಸರಿಯಾದ ರೀತಿಯಲ್ಲಿ ವಿಷಯವನ್ನು ತಿಳಿದುಕೊಂಡಿದ್ದೇವೆ ಎಂಬುದು ತಿಳಿದುಬರಲು ಇರುವ ಮಾನದಂಡ ಕೇವಲ ಬರಹ ಮಾತ್ರವೇ.

**ಅವಸರ ಬೇಡ**

ಸಹಜ, ಸರಳವಾದ ಸುಂದರ ಬರವಣಿಗೆ ಇರಲಿ. ಕೆಲವು ಬಾರಿ ವಿದ್ಯಾರ್ಥಿಗಳು ತಾವು ದಿನನಿತ್ಯದಲ್ಲಿ ಬರೆವ ಬರವಣಿಗೆಗಿಂತ ಬೇರೆಯೇ ರೀತಿಯ ಬರವಣಿಗೆಯ ಶೈಲಿಯನ್ನು ಪರೀಕ್ಷಾ ಸಮಯದಲ್ಲಿ ಪ್ರಯತ್ನಿಸುತ್ತಾರೆ. ಅದು ಒಳ್ಳೆಯದಲ್ಲ. ನಮ್ಮ ಮನಸ್ಸು ಮತ್ತು ಕೈ ಒಗ್ಗಿಕೊಂಡಿರುವ ಶೈಲಿಯು ಸುಲಭ ಮತ್ತು ವೇಗವನ್ನು ಪಡೆದಿರುವುದರಿಂದ ಅದನ್ನೇ ಅಳವಡಿಸಿಕೊಳ್ಳಿ. ಅವಸರದಲ್ಲಿ ಆದ ಯಾವುದೇ ಕೆಲಸವೂ ಉತ್ತಮವಾಗಿ ಮೂಡಿಬರದು.




ಮತ್ತೆ ನೀವು ಗಮನಕೊಡಬೇಕಾದ ಬಹುಮುಖ್ಯ ವಿಷಯಗಳು ಇವು : **ಬರವಣಿಗೆಯ ಗಾತ್ರ + ಬರವಣಿಗೆಯ ವೇಗ + ಸಮಯದ ವಿಭಾಗ .**

**ಬರವಣಿಗೆಯ ಗಾತ್ರ** : ಒಂದು ಮತ್ತು ಎರಡು ಪದ ಅಥವಾ ವಾಕ್ಯಗಳಲ್ಲಿ ಉತ್ತರಿಸಬೇಕಾದ ಪ್ರಶ್ನೆಗಳಿಗೆ ಕೆಲವರು ಪುಟಗಳಷ್ಟನ್ನು ಬರೆಯುತ್ತಾರೆ. ಅದು ತಪ್ಪು. ಯಾವುದಕ್ಕೆ ಎಷ್ಟು ಬೇಕೋ ಅಷ್ಟು ಮಾತ್ರ, ಸ್ಪಷ್ಟ ಮತ್ತು ಸ್ಫುಟವಾಗಿ ಬರೆಯಿರಿ. ಹೆಚ್ಚಿಗೆ ಬರೆದಲ್ಲಿ ಹೆಚ್ಚಿನ ಅಂಕ ನೀಡುವುದಿಲ್ಲ.

**ಬರವಣಿಗೆಯ ವೇಗ** : ಪ್ರತಿದಿನವೂ ಒಂದಷ್ಟು ಸಮಯವನ್ನು ಬರವಣಿಗೆಗಾಗಿ ಮೀಸಲಿಟ್ಟಿರಬೇಕು. ಇದರಿಂದ ನಮ್ಮ ಬರವಣಿಗೆಯು ಸುಂದರವಾಗಿ ಮತ್ತು ವೇಗವಾಗಿ ಮೂಡಿಬರಲು ಸಾಧ್ಯವಾಗುತ್ತದೆ. ಪರೀಕ್ಷೆಯ ವೇಳೆಯಲ್ಲಿ , ಸಮಯಕ್ಕೆ ಗಮನ ಕೊಡುವುದರಿಂದ, ನಮ್ಮ ಮನಸ್ಸು ಹೆಚ್ಚಾಗಿ ಅದರ ಕಡೆಗೇ ಹೋಗುತ್ತದೆ. ಇದರಿಂದ ಅದು ಪ್ರಕ್ಷುಬ್ಧಗೊಂಡು ಬರವಣಿಗೆಯು ಸುಂದರವಾಗಿರದೆ, ಓದಿ ಅರ್ಥಮಾಡಿಕೊಳ್ಳಲು ಮೌಲ್ಯಮಾಪಕರಿಗೆ ಕಷ್ಟವಾಗಿ, ನಮ್ಮ ಉತ್ತರ ಸರಿಯಾಗಿದ್ದರೂ ಕಡಿಮೆ ಅಂಕವನ್ನು ನೀಡುವ ಅವಕಾಶವಿದೆ. ಅದೇ ರೀತಿ ಸುಂದರ ಅಕ್ಷರವಿದ್ದಲ್ಲಿ ಓದಲು ಸಂತೋಷವಾಗಿ ಹೆಚ್ಚಿನ ಅಂಕವನ್ನೂ ನೀಡಲ್ಪಬಹುದು.

ಕಡಿಮೆ ಸಮಯದಲ್ಲಿ ಹೆಚ್ಚಿನ ಪತ್ರಿಕೆಗಳ ಮೌಲ್ಯಮಾಪನ ಮಾಡುವ ತುರಾತುರಿಯಲ್ಲಿರುವ ಒತ್ತಡದಲ್ಲಿರುವ ಮೌಲ್ಯಮಾಪಕರು ಓದಲು ಸುಲಭವಾಗಿರುವ ಪತ್ರಿಕೆಯನ್ನು ಬಯಸುತ್ತಾರೆ. ಆದ್ದರಿಂದ ನಮ್ಮ ಬರವಣಿಗೆಯು ಉತ್ತಮವಾಗಿರಬೇಕು.




**ಸಮಯ ವಿಭಾಗ:**

೨ ಗಂಟೆ ೩೦ ನಿಮಿಷ ೮೦ ಅಂಕಗಳಿಗೆ

(೧ ಗಂಟೆ ಅಂದರೆ ೬೦ ನಿಮಿಷ)

೨ ಗಂಟೆ ೩೦ = ೧೫೦/೬೦ = ೧.೮ ನಿಮಿಷ =೧ ಅಂಕ

ಇದೇ ರೀತಿ

| | |
|---|---|
| ಅಂಕ ೧ ಕ್ಕೆ | ೧.೮ ನಿಮಿಷ |
| ಅಂಕ ೨ ಕ್ಕೆ | ೩.೬ ನಿಮಿಷ |
| ಅಂಕ ೩ ಕ್ಕೆ | ೫.೪ ನಿಮಿಷ |
| ಅಂಕ ೪ ಕ್ಕೆ | ೭.೨ ನಿಮಿಷ |
| ಅಂಕ ೫ ಕ್ಕೆ | ೯.೦ ನಿಮಿಷ (ಭಾಷಾ ಪತ್ರಿಕೆಯಲ್ಲಿ ಮಾತ್ರವಿರುವ ಪ್ರಶ್ನೆಗಳು) |

ಹೀಗೆ ನಾವು ಸಮಯವನ್ನು ಹಂಚಿ ಬರೆಯಲು ಕಲಿತರೆ ಇನ್ನೂ ಸಮಯವು ಕೊನೆಯಲ್ಲಿ ನಮ್ಮ ರಿವಿಷನ್‌ಗಾಗಿ ಉಳಿದಿರುತ್ತದೆ. ಇದು ಒಂದು ಅಂದಾಜಿನ ಮೇಲೆ ಮಾದರಿ ಅಷ್ಟೆ. ಇದೇ ರೀತಿ ಇರಬೇಕೆಂದೇನೂ ಇಲ್ಲ.

**ಪರೀಕ್ಷಾ ಕೊಠಡಿಯಲ್ಲಿ**

✿ ಪರೀಕ್ಷೆಯ ಕೊಠಡಿಯಲ್ಲಿ ಆಲೋಚನೆ ಮಾಡುತ್ತಾ ಕೂರುವುದು ಸರಿಯಲ್ಲ. ನಿಮಗೆ ಧ್ಯಾನ ಮಾಡಲು ಬರುತ್ತಿದ್ದಲ್ಲಿ ಸ್ವಲ್ಪ ಸಮಯ ಮನಸ್ಸನ್ನು ಏಕಾಗ್ರಗೊಳಿಸಿ, ಶಾಂತ

ರಾಗಿ ಕಣ್ಮುಚ್ಚಿ ಕುಳಿತುಕೊಳ್ಳಿ. ಯಾವುದೇ ರೀತಿಯ ಆಲೋಚನೆಗಳನ್ನು ಮನಸ್ಸಿನಿಂದ ತೆಗೆದುಬಿಡಿ. ಮನಸ್ಸು ಶಾಂತವಾದಷ್ಟು ನಿಮ್ಮ ನೆನಪಿನ ಶಕ್ತಿ ಅಧಿಕವಾಗುತ್ತದೆ. ಬರವಣಿಗೆ ಸುಂದರವಾಗುತ್ತದೆ.

✿ ಪ್ರಶ್ನೆ ಪತ್ರಿಕೆಯನ್ನು ಕೊಟ್ಟಾಗ ಮೊದಲು ನಿಧಾನವಾಗಿ ಪ್ರತಿಯೊಂದು ಪ್ರಶ್ನೆಗಳನ್ನು ಓದಿ ಅರ್ಥಮಾಡಿಕೊಳ್ಳಿ ಮತ್ತು ಚೆನ್ನಾಗಿ ತಿಳಿದಿರುವ ಪ್ರಶ್ನೆಗಳನ್ನು ಮೊದಲು ಉತ್ತರಿಸಿ. ಇದೇ ಪ್ರಶ್ನೆ ಅದೇ ಪ್ರಶ್ನೆ ಮೊದಲು ಬರೆಯಬೇಕು ಎಂದು ಗೊಂದಲದಲ್ಲಿ ಸಿಲುಕಬೇಡಿ.

✿ ಎಲ್ಲಾ ಪ್ರಶ್ನೆಗಳನ್ನು ಉತ್ತರಿಸಿ (ಉತ್ತರವನ್ನು ಬರೆಯದೆ ಬಿಡುವುದರಿಂದ ಆಗುವ ನಷ್ಟವನ್ನು ಯೋಚಿಸಿ).




ಮೊದಲು ಗೊತ್ತಿರುವುದನ್ನೆಲ್ಲಾ ಬರೆದ ಮೇಲೆ, ಇತರ ಪ್ರಶ್ನೆಗಳಿಗೆ ಅಥವಾ ಅನುಮಾನವಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. ಯಾವುದನ್ನೂ ಬಿಟ್ಟುಬರಬೇಡಿ. ಗೊತ್ತಿದ್ದಷ್ಟಾದರೂ ಪ್ರಯತ್ನಿಸಿ.

✿ ಪ್ರತಿಯೊಂದು ಪ್ರಶ್ನೆಗೂ ಸಮಯ ವಿಭಜನೆ ಮುಖ್ಯ. ಹೆಚ್ಚಿನ ಸಮಯವನ್ನು ಗೊತ್ತಿಲ್ಲದ ಪ್ರಶ್ನೆಗೆ ಉತ್ತರವನ್ನು ಯೋಚಿಸುತ್ತಾ ಕುಳಿತು ಸಮಯ ನಷ್ಟ ಮಾಡಿಕೊಳ್ಳಬೇಡಿ. ಅರ್ಧವೇನಾದರೂ ಬರೆದು, ಉಳಿದುದು ಮರೆತು ಹೋಗಿದ್ದಲ್ಲಿ ಅದಕ್ಕೆ ಬೇಕಾಗುವಷ್ಟು ಸ್ಥಳವನ್ನು ಬಿಟ್ಟು ಮುಂದಿನ ಗೊತ್ತಿರುವ ಪ್ರಶ್ನೆಯನ್ನು ತೆಗೆದುಕೊಳ್ಳಿ. ಮತ್ತೊಮ್ಮೆ ಕೊನೆಯಲ್ಲಿ ನೀವು ಬರೆದ ಉತ್ತರ ಪತ್ರಿಕೆಯನ್ನು ಓದಿ. ಅದಕ್ಕಾಗಿ ಸುಮಾರು ೫-೧೦ ನಿಮಿಷವಾದರೂ ಇಟ್ಟಿರಬೇಕು. ಆಗ ಅರ್ಧ ಬಿಟ್ಟ ಉತ್ತರವನ್ನು ಪೂರ್ಣಗೊಳಿಸಬಹುದು.

✿ ಟೈಮ್ ಟೇಬಲ್ - ಕೆಲವು ವೇಳೆ ನಾವು ಬರೆದ ಪ್ರಶ್ನೆಗೆ ಮತ್ತೊಮ್ಮೆ ಉತ್ತರ ಬರೆಯಲೂಬಹುದು. ಅದನ್ನು ತಪ್ಪಿಸಲು ಬರೆದ ಪ್ರಶ್ನೆಗಳನ್ನು ಮರೆಯದೆ ಟಿಕ್ ಅಥವಾ ಮಾರ್ಕ್ ಮಾಡಿ. ನಂತರ ಕೊನೆಯಲ್ಲಿ ಪ್ರಶ್ನೆ ಪತ್ರಿಕೆಯನ್ನು ಕೂಲಂಕಷವಾಗಿ ಅವಲೋಕಿಸಿ, ಎಲ್ಲಾ ಪ್ರಶ್ನೆಗಳಿಗೆ ಉತ್ತರ ಬರೆಯಲಾಗಿದೆಯೇ ಎಂಬುದನ್ನು ಪರೀಕ್ಷಿಸಿಕೊಳ್ಳಿ. ✸

**ಯುವಚೇತನ**



## ಭಾರತ ಮತ್ತು ಆಧ್ಯಾತ್ಮಿಕತೆ

ಮಾನವ ಜನಾಂಗದ ಆಧ್ಯಾತ್ಮೀಕರಣ — ಇದೊಂದೇ ಭಾರತೀಯನ ಬಾಳಿನ ಕೆಲಸ. ಅದರ ನಿತ್ಯಗಾನದ ಪಲ್ಲವಿ, ಜೀವನದ ಸಾರ ಸರ್ವಸ್ವ, ವ್ಯಕ್ತಿತ್ವದ ತಳಹದಿ. ತಾನು ಬದುಕಿರುವುದು ಇದೊಂದಕ್ಕಾಗಿಯೇ. ಭಾರತ ತನ್ನ ಈ ಜೀವನ ಗತಿಯಲ್ಲಿ, ಟರ್ಕ್ ಅಥವಾ ಟರ್ಟರ್ ತನ್ನನ್ನು ಆಳಲಿ, ಮೊಗಲ್ ಅಥವಾ ಇಂಗ್ಲಿಷರು ತನ್ನನ್ನು ಆಳಲಿ, ಸ್ವಲ್ಪವೂ ತನ್ನ ಆದರ್ಶವನ್ನು ಬದಲಿಸಲಿಲ್ಲ.

ಭರತಖಂಡದಲ್ಲಿ ಪ್ರಪಂಚವನ್ನೇ ಚಲಿಸಬಲ್ಲ ಆಧ್ಯಾತ್ಮಿಕ ಮಹಾವ್ಯಕ್ತಿಗಳು ಇಲ್ಲದ ಯಾವುದಾದರೂ ಕಾಲವನ್ನು ತೋರಿಸಿರಿ ಎಂದು ನಾನು ಸವಾಲು ಹಾಕುತ್ತೇನೆ. ಭಾರತದ ಕೆಲಸ ಆಧ್ಯಾತ್ಮಿಕತೆ. ಇದು ರಣಕಹಳೆಯ ಕೋಲಾಹಲದಿಂದಾಗಲಿ, ಸೈನ್ಯಗಳ ಚಲನವಲನಗಳಿಂದಾಗಲಿ ಸಾಧ್ಯವಿಲ್ಲ. ಸಪ್ಪಳವಿಲ್ಲದೆ, ಯಾರಿಗೂ ಗೋಚರಿಸದೆ ಹಿಮಮಣಿ ಜಗದ ಮೇಲೆ ಬಿದ್ದರೂ ಪ್ರಪಂಚದ ಶ್ರೇಷ್ಠತಮ ಪುಷ್ಪಗಳನ್ನು ವಿಕಾಸಮಾಡುವಂತಿದೆ ಭಾರತದ ಪ್ರಭಾವ. ಈ ಪ್ರಭಾವ ಸ್ವಭಾವತಃ ಗಂಭೀರವಾಗಿರುವುದರಿಂದ ಬೇರೆ ದೇಶಗಳಿಗೆ ಹೋಗುವುದಕ್ಕೆ ಅವಕಾಶ, ಸನ್ನಿವೇಶಗಳಿಗಾಗಿ ಕಾಯಬೇಕಾಗಿದೆ. ಅದು ತನ್ನ ದೇಶದ ಮೇರೆಯಲ್ಲಿ ಎಂದಿಗೂ ಕೆಲಸ ಮಾಡುವುದನ್ನು ನಿಲ್ಲಿಸದೆ ಇದ್ದರೂ ಅನ್ಯದೇಶಗಳಿಗೆ ಹೋಗುವುದಕ್ಕೆ ಇದು ಸ್ವಭಾವತಃ ಸಾಧುವಾಗಿರುವುದರಿಂದ, ಅವಕಾಶ, ಸನ್ನಿವೇಶಗಳಿಗಾಗಿ ಕಾಯಬೇಕಾಗಿದೆ. ಯಾವಾಗಲಾದರೂ ಚಕ್ರಾಧಿಪತ್ಯಗಳನ್ನು ಕಟ್ಟುವ ಟಾರ್ಟರ್, ಪರ್ಶಿಯನ್, ಗ್ರೀಕ್ ಅಥವಾ ಅರಬ್ಬರು ಭರತಖಂಡಕ್ಕೆ ಅನ್ಯದೇಶದ ಸಂಪರ್ಕವನ್ನು ಒದಗಿಸಿದಾಗ ಇಲ್ಲಿಂದ ಆಧ್ಯಾತ್ಮಿಕ ಪ್ರವಾಹ ಎದ್ದು ಪ್ರಪಂಚವನ್ನೆಲ್ಲಾ ವ್ಯಾಪಿಸಿದೆ ಎಂಬುದು ಪ್ರತಿಯೊಬ್ಬ ವಿದ್ಯಾವಂತನಿಗೂ ಗೊತ್ತಿರುವ ವಿಷಯ.

*(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂಪುಟ ೫, ಪುಟ ೪೦೫-೬)*